ಮುಳುಗಾಟ ಅತಿಯಾಯಿತೆಂಬುದು ಪರಮಹಂಸರ ಗಮನಕ್ಕೆ ಬಂದಾಗ "ಹೀಗೆಲ್ಲಾ ಆದರೆ ನೀನು ಇದ್ದುಬಿದ್ದ ಭಕ್ತಿಯನ್ನೂ ಕಳೆದುಕೊಂಡುಬಿಡುತ್ತೀಯಪ್ಪಾ" ಎಂದು ಝುಂಕಿಸಿದ್ದರು. ಅಷ್ಟೇ ಸಾಕಾಯಿತು, ರಾಮಕೃಷ್ಣಾನಂದರು ಆಗಿಂದಾಗಲೇ ಹೋಗಿ ಆ ಗ್ರಂಥಗಳನ್ನೆಲ್ಲ ಗಂಗಾನದಿಗೆ ಎಸೆದುಬಿಟ್ಟರು.

ಅಪೂರ್ವವಾದ ಬುದ್ಧಿಶಕ್ತಿ ಮೇಧಾಶಕ್ತಿಗಳಿಂದ ಕೂಡಿದ ಶ್ರೇಷ್ಠಪ್ರವಚನಕಾರರಲ್ಲಿ ರಾಮಕೃಷ್ಣಾನಂದರೂ ಒಬ್ಬರಾಗಿದ್ದರು. ಅವರ ಗ್ರಂಥರಚನಾ ಸಾಮರ್ಥ್ಯವೂ ಹಿರಿದಾಗಿತ್ತು. 'ದಿ ಮೆಸೇಜ್ ಆಫ್ ಎಕ್ಸ್‌ಟರ್‌ನಲ್ ವಿಸ್‌ಡಂ', 'ಲೈಫ್ ಆಫ್ ಶ್ರೀರಾಮಾನುಜ' ಮೊದಲಾದ ಉದ್ಗ್ರಂಥಗಳನ್ನು ಅವರು ರಚಿಸಿದ್ದಾರೆ. ಆಧ್ಯಾತ್ಮಿಕ ಸಂಭಾಷಣೆಯಲ್ಲಿಯೂ ಚತುರರಾಗಿದ್ದ ಅವರ ಸತ್ಸಂಗವನ್ನು ಭಕ್ತರು ಇಷ್ಟಪಡುತ್ತಿದ್ದರು. "ರಾಜಕಾರಣ, ವಿಜ್ಞಾನ ಮತ್ತು ಧರ್ಮ – ಈ ಮೂರರ ನಡುವಣ ತಾರತಮ್ಯವೇನು, ಮಹಾರಾಜ್" ಎಂದು ಒಮ್ಮೆ ಭಕ್ತರೊಬ್ಬರು ಪ್ರಶ್ನಿಸಿದರು. "ರಾಜಕಾರಣವು ಪಂಚೇಂದ್ರಿಯಗಳು ಹೊರಮುಖನಾಗಿ ಹರಿಯುವಂತೆ ಮಾಡಿದರೆ ಧರ್ಮವು ಅವುಗಳು ಒಳಮುಖನಾಗಿ ಹರಿಯುವಂತೆ ಮಾಡುತ್ತದೆ. ವಿಜ್ಞಾನವು ಹೊರಜಗತ್ತನ್ನು ಗೆಲ್ಲುವ ವಿಫಲಯತ್ನವನ್ನು ಕೈಗೊಂಡರೆ, ಧರ್ಮವು ನಮ್ಮ ಒಳಜಗತ್ತನ್ನು ಗೆಲ್ಲುವ ಸಫಲಯತ್ನವನ್ನು ಕೈಗೊಳ್ಳುತ್ತದೆ" ಎಂದು ಕಾವ್ಯಮಯವಾಗಿ, ಸೂತ್ರಪ್ರಾಯವಾಗಿ ಉತ್ತರಿಸಿದರು.


ಇತರರ ದೋಷಗಳನ್ನು ತಿದ್ದಲೇಬೇಕಾದಾಗ ಒಮ್ಮೊಮ್ಮೆ ನಿಷ್ಠುರರಾಗಿಯೂ ಇರುತ್ತಿದ್ದರು. ಮಠಕ್ಕೆ ಬಂದು ದಿನಪತ್ರಿಕೆ ತಂದು ಓದುತ್ತಿದ್ದವನನ್ನು ಕಂಡು "ಅದನ್ನು ಎಲ್ಲಾದರೂ ಓದಬಹುದಪ್ಪಾ, ಇಲ್ಲಿ ಬಂದಾಗಲಾದರೂ ದೇವರ ಚಿಂತನೆ ಮಾಡಬೇಡವೇ" ಎಂದು ಬುದ್ಧಿಹೇಳಿದರು. ಮಠದಲ್ಲಿ ಪ್ರವಚನ ಕಾಲದಲ್ಲಿ ಭಕ್ತನೊಬ್ಬನು ಆಕಾಶವೇ ಕಳಚಿ ತಲೆಯಮೇಲೆ ಬಿದ್ದಿದೆಯೆಂಬಂತೆ ಗಲ್ಲಕ್ಕೆ ಕೈಕೊಟ್ಟು ಸಪ್ಪೆಮೋರೆಯಲ್ಲಿ ಕುಳಿತಿದ್ದನು. ಆಗ ಸ್ವಾಮಿಗಳು "ಹಾಗೆ ಕೂರಬೇಡಪ್ಪಾ, ಅದು ಮೂದೇವಿಯ ಭಂಗಿ, ನಗುನಗುತ್ತಾ ಇರಬೇಕು" ಎಂದು ಎಚ್ಚರಿಸಿದರು. ಒಬ್ಬಾತನು "ನಮ್ಮ ಮಠಗಳು, ನಮ್ಮ ದೇವಾಲಯಗಳು ಮುಂತಾದವೆಲ್ಲವೂ ಸುಧಾರಣೆಯಾಗಬೇಕು ಮಹಾರಾಜ್" ಎಂದು ಜಂಬದಿಂದ ಹೇಳಿದಾಗ ರಾಮಕೃಷ್ಣಾನಂದರು ಸಹಿಸಿಕೊಳ್ಳಲಾರದೆ "ಹೌದು, ನೀನು ಹುಟ್ಟುವುದಕ್ಕೆ ಮುಂಚೆ ಈ ದೇವರು ದಿಕ್ಕುದಿವಾಣವಿಲ್ಲದೆ ಬಿದ್ದುಕೊಂಡಿದ್ದನಲ್ಲವೆ" ಎಂದು ಗದರಿದರು. ಕೆಲವೊಮ್ಮೆ ದುಡುಕಿನಿಂದ ಗುರುಭಾಯಿಗಳನ್ನೂ ಏನಾದರೂ ಅಂದುಬಿಟ್ಟರೆ ಆಮೇಲೆ ತಾವೇ ಅವರಲ್ಲಿ ಕ್ಷಮೆಯಾಚಿಸುತ್ತಿದ್ದರು.

**ಪ್ರಯಾಣಕಾಲ:** ಉಪವಾಸವನವಾಸಗಳಲ್ಲಿ, ತಪಸ್ಸಾಧನೆಯಲ್ಲಿ, ಅವಿಶ್ರಾಂತವಾದ ದುಡಿಮೆಯಲ್ಲಿ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತ ರಾಮಕೃಷ್ಣಾನಂದರು ಕ್ಷಯ, ಸಕ್ಕರೆಕಾಯಿಲೆಗಳಿಗೆ ತುತ್ತಾಗಿಬಿಟ್ಟರು. ಪ್ರಯಾಣಕಾಲ ಬಂದೇಬಿಟ್ಟಿತು. ಭುವನಸುಂದರೀದೇವಿ ವಿಷಯತಿಳಿದು ಮಗನ ಅಂತಿಮದರ್ಶನಕ್ಕಾಗಿ ಬಂದಳು. ತಾನು ಹಡೆದಮಗ ತನ್ನ ಕಣ್ಮುಂದೆಯೇ ಕಣ್ಮರೆಯಾಗುವುದನ್ನು ಕಂಡು ಯಾವ ತಾಯಿ ತಾನೆ ಕಣ್ಣೀರಿಡುವುದಿಲ್ಲ! ತಾಯಿಯನ್ನು ಕಂಡೊಡನೆ ರಾಮಕೃಷ್ಣಾನಂದರು ತಮ್ಮ ತಲೆಯನ್ನು ಆಕೆಯತ್ತ ಹೊರಳಿಸುತ್ತ "ನನ್ನ ತಲೆಯಮೇಲೆ ನಿನ್ನ ಕೈಯಿಟ್ಟು ಆಶೀರ್ವದಿಸು ತಾಯೆ" ಎಂದು ಬೇಡಿದರು. ಅದೊಂದು ಕರುಳುಕರಗಿಸುವ ಸನ್ನಿವೇಶವಾಗಿತ್ತು. ಗಳಗಳನೆ ಕಣ್ಣೀರು ಹರಿಸುತ್ತಲೇ "ಸಾರ್ಥಕವಾದ ಬದುಕು ನಿನ್ನದಾಯಿತು. ಮಗನೇ, ನಿನಗೆ ಮಂಗಳವಾಗಲಿ" ಎಂದು ಹರಸಿದಳು. ಕೊನೆಯದಿನ ಪ್ರಸಿದ್ಧಗಾಯಕ ಪುಲಿನ್‌ಮಿತ್ರ ಎಂಬಾತನು ರಾಮಕೃಷ್ಣಾನಂದರನ್ನು ಕಾಣಲು ಬಂದನು. ಅವನಿಂದ ರಾಮಕೃಷ್ಣಾನಂದರು "ಯಾತನೆಯ ರಾತ್ರಿಯದು ಕಳೆದುಹೋಯಿತು ನೋಡು । ಸಾವು ಬದುಕಿನ ಭ್ರಮೆಯು ಇನ್ನೆಂದಿಗೂ ಇಲ್ಲ" ಮುಂತಾದ ಅರ್ಥವಿರುವ ಹಾಡೊಂದನ್ನು ಆತನಿಂದ ಹಾಡಿಸಿ ಕೇಳಿ ಸಂತೋಷಪಟ್ಟರು. ೧೯೧೧, ಆಗಸ್ಟ್ ೨೧ರಂದು ಅವರು ಸಮಾಧಿಸ್ಥರಾಗಿ, ಆ ಸ್ಥಿತಿಯಲ್ಲಿಯೇ ದೇಹತ್ಯಾಗಮಾಡಿದರು. "ಅಯ್ಯೋ ಶಶಿ ಹೊರಟುಹೋದ. ನನ್ನ ಬೆನ್ನೆಲುಬೇ ಮುರಿದಂತಾಯಿತು" ಎಂದು ಶ್ರೀಮಾತೆ ಕಂಬನಿಮಿಡಿದರು.

**ಉಪದೇಶವಚನಗಳು:** ೧) ದೇವರನ್ನು ಪರಿಪೂರ್ಣವಾಗಿ ನಂಬಬೇಕು. ಒಬ್ಬನೇ ದೇವರು ಅನಂತರೂಪಗಳಲ್ಲಿ ಅನಂತನಾಮಗಳಲ್ಲಿ ತೋರಿಕೊಂಡಿದ್ದಾನೆ. ಅವನು ಸರ್ವಶಕ್ತನೂ ಕೃಪಾಸಾಗರನೂ ಆಗಿದ್ದಾನೆ. ಸದ್ಗುರುವೆಂದರೆ ಅವನು ದೇವರೇ. ೨) ಪಾಶ್ಚಾತ್ಯರದು ವಿಕಾಸವಾದವಾದರೆ ನಮ್ಮದು ಪರಿಭ್ರಮಣವಾದ. ವಾರಗಳು, ಮಾಸಗಳು, ಋತುಗಳು, ಸಂವತ್ಸರಗಳು, ಚಕ್ರರೂಪದಲ್ಲಿ ಸುತ್ತುತ್ತಲೇ ಇರುತ್ತವೆ. ಜನನಮರಣಗಳೂ ಪರಿಭ್ರಮಣವೇ. ಆ ಪರಿಭ್ರಮಣದಿಂದ ಹೊರಬ್ಬಾಗಿ ನಿಲ್ಲುವುದೇ ಮುಕ್ತಿ. ೩) ಗುಣದೋಷಗಳು ಒಂದೇನಾಣ್ಯದ ಎರಡುಮುಖಗಳಿದ್ದಂತೆ. ಆರೋಗ್ಯವಂತ ಆಟಗಾರನಿಗೆ ತುಪ್ಪವು ವರವಾದರೆ ವಿಷಮಶೀತಜ್ವರಪೀಡಿತನಿಗೆ ಅದು ಮೃತ್ಯುಸಮಾನ. ೪) ತ್ಯಾಗವೆಂಬುದು ಸಂಪೂರ್ಣವಾಗಿರಬೇಕು. 'ಇದೊಂದು ಮಾತ್ರ ಸ್ವಲ್ಪ ಇರಲಿ' ಎಂದು ಜೋಪಾನಿಸಿಕೊಳ್ಳಲು ಹೋದರೆ ಮತ್ತೆ ಸಂಸಾರಕ್ಕೆ ಬೀಳಬೇಕಾಗುತ್ತದೆ. ೫) ಪರೋಪಕಾರ, ಪರಸೇವೆಗಳನ್ನು ಹೃತ್ಪೂರ್ವಕವಾಗಿ ರೂಢಿಸಿಕೊಳ್ಳಬೇಕು. ❒

# ಅದ್ವಿತೀಯ ಮಹಿಳೆ ಮೇರಿ ಕ್ಯೂರಿ

ಡಾ. ರಾ.ಲ. ಜಗದೀಶ್



(ಹಿಂದಿನ ಸಂಚಿಕೆಯಿಂದ)

**ಆಘಾತದಲ್ಲೂ ಅರಳಿದ ಹೂವು:** ವಿಕಿರಣಶೀಲ ಧಾತುಗಳ ಗುಣಲಕ್ಷಣಗಳ ಬಗ್ಗೆ ಮೇರಿ ಸಂಶೋಧನೆಯನ್ನು ಆರಂಭಿಸಿದಳು. 'ಥೋರಿಯಂ' ಎಂಬ ಹೆಸರಿನ ಧಾತುವನ್ನೂ ಕಂಡುಹಿಡಿದಳು. ಅನಂತರ ನಾಲ್ಕು ವರ್ಷಗಳ ಕಾಲ ಆಕೆ ನಡೆಸಿದ ಸಂಶೋಧನೆ 'ರೇಡಿಯಂ'ನ ಆವಿಷ್ಕಾರಕ್ಕೆ ಕಾರಣವಾಯಿತು. ತಾನು ತಯಾರಿಸಿದ ರೇಡಿಯಂ ಶುದ್ಧವಾಗಿಲ್ಲ ಎಂದು ಆಕೆ ಅರಿತುಕೊಂಡಿದ್ದಳು. ಆದ್ದರಿಂದ ಮತ್ತೆ ಸಂಶೋಧನೆಯಲ್ಲಿ ತೊಡಗಿಸಿಕೊಂಡಳು. ಈ ಉತ್ಕೃಷ್ಟ ಅನ್ವೇಷಣೆಗಾಗಿ ಆಕೆಗೆ ೧೯೧೧ ರ ನೊಬೆಲ್ ಪ್ರಶಸ್ತಿ ಸಿಕ್ಕಿತು. ಅತ್ಯಂತ ನಿರ್ಣಾಯಕ ಘಟ್ಟದಲ್ಲಿ ಆಕೆಯ ಸಂಶೋಧನೆಯ ಕಾರ್ಯ ಸಾಗಿತ್ತು. ಅದರಲ್ಲಿ ಯಶಸ್ಸನ್ನು ಪಡೆಯುತ್ತಿರುವುದು ಆಕೆಗೆ ಸಂತೋಷವನ್ನು ಉಂಟುಮಾಡಿತು.

೧೯೦೬, ಏಪ್ರಿಲ್ ೧೯ರಂದು ಒಂದು ಆಘಾತಕಾರಿ ಘಟನೆ ನಡೆಯಿತು. ಆ ದಿನ ಆಕೆ ತನ್ನ ಸಹವಿಜ್ಞಾನಿಗಳನ್ನು ಸಂಜೆ ಮನರಂಜನೆಗಾಗಿ ಮನೆಗೆ ಆಹ್ವಾನಿಸಿದ್ದಳು. ಅವಳ ಮನಸ್ಸಿನಲ್ಲಿ ಆ ದಿನ ಮಾಡಬೇಕಾದ ಕೆಲಸಗಳ ಬಗ್ಗೆ ಆಲೋಚನೆ ನಡೆಯುತ್ತಿತ್ತು. ಪ್ರಯೋಗಾಲಯದ ಕೆಲಸದ ನಂತರ ಪಿಯರಿ ಕ್ಯೂರಿ ಭಾರೀ ಮಳೆಯನ್ನೂ ಲೆಕ್ಕಿಸದೆ, ಒಂದು ಭೋಜನಕೂಟಕ್ಕೆ ಹೋದನು. ಅಲ್ಲಿ ಒಂದು ಪ್ರಮುಖ ವಿಷಯದ ಬಗ್ಗೆ ಮಾತನಾಡಿದನು. ಅದೆಂದರೆ, ಪ್ರಯೋಗಾಲಯಗಳಲ್ಲಿ ಜರುಗುವ ಅಪಘಾತಗಳನ್ನು ತಡೆಯುವ ಬಗೆಗೆ ಕಾನೂನು, ನಿಯಮಾವಳಿಗಳನ್ನು ರೂಪಿಸುವುದು. ಅನಂತರ ಮಳೆಯ ನಡುವೆಯೇ, ಪುಸ್ತಕ ಪ್ರಕಾಶಕನೊಬ್ಬನ ಕೊಠಡಿಗೆ ಪಿಯರಿ ತೆರಳಿದನು. ಗ್ರಂಥಾಲಯದ ದ್ವಾರ ಮುಚ್ಚಿದ್ದರಿಂದ ಇನ್ನೊಂದು ಬದಿಯಲ್ಲಿದ್ದ ಪ್ರವೇಶದ್ವಾರವನ್ನು ತಲುಪಲು ರಸ್ತೆಯನ್ನು ದಾಟಿದನು. ತಲೆಯಲ್ಲಿ ಅನೇಕ ಆಲೋಚನೆಗಳು. ಹಾಗೆ ದಾಟುತ್ತಿರುವಾಗ ಸೈನ್ಯದ ಸಮವಸ್ತ್ರಗಳನ್ನು ಸಾಗಿಸುತ್ತಿದ್ದ ಕುದುರೆ ಗಾಡಿಯೊಂದಕ್ಕೆ ಸಿಲುಕಿ, ಸ್ಥಳದಲ್ಲಿಯೇ ಮರಣವನ್ನಪ್ಪಿದನು.

ಈ ಆಘಾತಕಾರಿ ಸುದ್ದಿಯಿಂದ ಮೇರಿ ತಳಮಳಿಸಿದಳು. ಆದರೂ ಎದೆಗುಂದದೆ, ಮುಂದಿನ ವ್ಯವಸ್ಥೆಗಳನ್ನು ಮಾಡಿದಳು. ಮರುದಿನ ವೃತ್ತಪತ್ರಿಕೆಗಳಲ್ಲಿ ಪಿಯರಿಯ ದುರಂತ ಸಾವಿನ ಸುದ್ದಿಯೇ ಪ್ರಮುಖವಾಗಿ ಪ್ರಕಟವಾಯಿತು. ಸಂತಾಪಸೂಚಕ ಸಂದೇಶಗಳು ಪ್ರವಾಹದಂತೆ ಹರಿದುಬಂದವು. ಪಿಯರಿಯ ಸಹೋದರನಾದ ಜಾಕಸ್ ಅವಳಿಗೆ ಸಾಂತ್ವನ ಹೇಳಿದ. ಅನಂತರದ ದಿನಗಳಲ್ಲಿ ಹಲವು ಮುಖ್ಯ ಘಟನೆಗಳು ಜರುಗಿದವು. ಜಾಕಸ್‌ನ ಸಾಂತ್ವನ ಮತ್ತು ನೈತಿಕ ಬೆಂಬಲದಿಂದ ಮೇರಿ ತನ್ನ ಕೆಲಸವನ್ನು ಪುನಃ ಆರಂಭಿಸಿದಳು. ಇದಲ್ಲದೆ, ಆಕೆಯ ಕುಟುಂಬಕ್ಕೆ ಸಹಾಯ ಒದಗಿಸುವುದಾಗಿ ಫ್ರೆಂಚ್ ಸರ್ಕಾರ ಘೋಷಿಸಿತು. ಆದರೆ ಸರ್ಕಾರ ಕೊಡಬಂದ ಪಿಂಚಣಿಯನ್ನು ಮೇರಿ ನಯವಾಗಿ ನಿರಾಕರಿಸಿದಳು. ತನ್ನ ಕಾಲ ಮೇಲೆ ತಾನು ನಿಲ್ಲುವ ಸಾಮರ್ಥ್ಯ ಇದೆ ಎಂದು ಉತ್ತರ ಕೊಟ್ಟಳು. ತಾನು ಇಲ್ಲದೆ ಹೋದರೂ, ಸಂಶೋಧನಾ ಕಾರ್ಯಗಳು ಮುಂದುವರಿಯುತ್ತಿರಬೇಕೆಂದು ಪಿಯರಿ ಆಶಿಸಿದ್ದ. ಆವನ ಆ ಮಾತುಗಳನ್ನು ನೆನಪಿಸಿಕೊಂಡು, ಮೇರಿ ಆಘಾತದಿಂದ ಚೇತರಿಸಿಕೊಂಡಳು; ಎಂದಿನ ಕಾಠಿಣ್ಯ ಮತ್ತು ದೃಢತೆಯಿಂದ ಸಂಶೋಧನೆಯನ್ನು ಮುಂದುವರಿಸಿದಳು. ಆಗ ಅವಳ ವಯಸ್ಸು ಕೇವಲ ೩೮ ವರ್ಷ.

**ವಿದ್ಯಾಕ್ಷೇತ್ರದಲ್ಲಿ ಸಾಧನೆ:** ೧೯೦೩ ರಲ್ಲಿಯೇ ಮೇರಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಳು. ಅವಳು ಅಧ್ಯಯನ ಮಾಡಿದ್ದ ಸಾರ್‌ಟೋನ್ ವಿಶ್ವವಿದ್ಯಾನಿಲಯವೇ ಈಗ ಅವಳನ್ನು ಆಹ್ವಾನಿಸಿತು; ಪಿಯರಿ ನಿರ್ವಹಿಸುತ್ತಿದ್ದ ಶೈಕ್ಷಣಿಕ ಹುದ್ದೆಯನ್ನು ವಹಿಸಿಕೊಳ್ಳುವಂತೆ ಕೇಳಿಕೊಂಡಿತು. ಈ ಹುದ್ದೆಯನ್ನು ಒಪ್ಪಿಕೊಳ್ಳಲು ಮೇರಿಗೆ ಒಂದು ಪ್ರಬಲವಾದ ಕಾರಣವೂ ಇತ್ತು. ಇದರಿಂದ ತನ್ನ ಪತಿ ಪಿಯರಿಯ ಆಸೆಯೊಂದು ನೆರವೇರಬಹುದು ಎಂದು ಅವಳು ಆಶಿಸಿದಳು. ಅದೆಂದರೆ ಅತ್ಯಾಧುನಿಕ ಪ್ರಯೋಗಾಲಯ

ವೊಂದರ ನಿರ್ಮಾಣ. ಮೇರಿ ಬರಿಯ ಸಂಶೋಧಕಿ ಅಥವಾ ಶಿಕ್ಷಕಿ ಮಾತ್ರವೇ ಆಗಿರಲಿಲ್ಲ, ಒಂದು ವೈಜ್ಞಾನಿಕ ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವ ಹೊಣೆಗಾರಿಕೆ ಹೊತ್ತ ಶ್ರೇಷ್ಠ ವಿಜ್ಞಾನಿ ಕೂಡ ಆಗಿದ್ದಳು.

ಸಾಂಪ್ರದಾಯಿಕ ಶಿಕ್ಷಣದಲ್ಲಿ ಮೇರಿಗೆ ಅಷ್ಟೊಂದು ಒಲವಿರಲಿಲ್ಲ. ಹೀಗಾಗಿ, ತನ್ನ ಸಹೋದ್ಯೋಗಿ ವಿಜ್ಞಾನಿಗಳು ಮತ್ತು ಸ್ನೇಹಿತರೊಡನೆ ಸೇರಿ ತಾನೇ ಒಂದು ಖಾಸಗಿ ಶಾಲೆಯನ್ನು ಆರಂಭಿಸಿದಳು. ಅಲ್ಲಿ ತನ್ನ ಮಕ್ಕಳೂ ಸೇರಿ, ಎಲ್ಲ ವಿದ್ಯಾರ್ಥಿಗಳಿಗೂ ಬಹು ಉತ್ತಮ ಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಂಡಳು. ಅಲ್ಲಿ ಖ್ಯಾತನಾಮರಾದ ವಿಜ್ಞಾನಿಗಳೇ ಪಾಠ ಮಾಡುತ್ತಿದ್ದರು. ಇದು ಪೋಷಕರೇ ಶಿಕ್ಷಕರಾಗಿದ್ದ ಒಂದು ವಿಶಿಷ್ಟ ಶಾಲೆಯಾಗಿತ್ತು. ಕಠಿಣ ಪಠ್ಯಕ್ರಮ ವಿಲ್ಲದೆಯೇ ವಿಜ್ಞಾನದ ಪರಿಕಲ್ಪನೆಗಳನ್ನು ಬೋಧಿಸಬೇಕು ಎನ್ನುವ ಆಶಯ ಆ ಶಿಕ್ಷಕರಲ್ಲಿ ಇತ್ತು. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಇದು ಅನುಕೂಲವಾಗುತ್ತದೆಯೆಂದು ಅವರು ಭಾವಿಸಿದ್ದರು. ಬೋಧನೆಯೊಂದಿಗೆ ಕ್ರೀಡೆ ಹಾಗೂ ದೈಹಿಕ ಚಟುವಟಿಕೆಗಳು ಕೂಡ ಇರುತ್ತಿದ್ದವು. ಅಲ್ಲಿನ ವಾತಾವರಣ ತಮ್ಮ ಬೆಳವಣಿಗೆಯ ಮೇಲೆ ಪರಿಣಾಮ ಬೀರಿತು ಎಂದು ಅಲ್ಲಿ ಕಲಿತ ಮಕ್ಕಳು, ದೊಡ್ಡವರಾದ ಮೇಲೆ ಕೂಡ, ಸಂತಸದಿಂದ ಸ್ಮರಿಸಿಕೊಳ್ಳುತ್ತಿದ್ದರು.

**ಜನಪ್ರಿಯ ವಿಜ್ಞಾನಿ:** ೧೮೯೮ರಲ್ಲಿ ತಾನು ಕಂಡುಹಿಡಿದ ವಿಕಿರಣಶೀಲ ಮೂಲವಸ್ತುವಿಗೆ 'ಪೊಲೋನಿಯಂ' ಎಂದು ಮೇರಿ ನಾಮಕರಣ ಮಾಡಿದ್ದಳು. ತನ್ನ ತಾಯ್ನಾಡಾದ ಪೋಲೆಂಡಿನ ಬಗೆಗೆ ಅವಳಿಗಿರುವ ಪ್ರೀತಿಯನ್ನು ಇದು ಎತ್ತಿತೋರಿಸುತ್ತದೆ. ಈ ಧಾತುವು ಯುರೇನಿಯಂಗಿಂತಲೂ ನೂರು ಪಟ್ಟು ಹೆಚ್ಚು ವಿಕಿರಣಶಕ್ತಿ ಉಳ್ಳದ್ದಾಗಿದೆ.

೧೯೧೧ ರಲ್ಲಿ ರಸಾಯನಶಾಸ್ತ್ರ ವಿಭಾಗದಲ್ಲಿ ಎರಡನೆಯ ಬಾರಿಗೆ ನೊಬೆಲ್ ಪ್ರಶಸ್ತಿ ಬಂದಿದ್ದು, ಮೇರಿಯ ಮೇಲೆ ಕೆಲವರ ಅಸಮಾಧಾನಕ್ಕೆ ಕಾರಣವಾಯಿತು. ಆದರೆ ಅದನ್ನು ನಿರಾಕರಿಸಿದ ರಸಾಯನಶಾಸ್ತ್ರಜ್ಞರು, ರೇಡಿಯಂ ಮತ್ತು ಪೊಲೋನಿಯಂ ಧಾತುಗಳ ಆವಿಷ್ಕಾರ, ಆಮ್ಲಜನಕದ ಆವಿಷ್ಕಾರದ ನಂತರದ ಅತ್ಯಂತ ಶ್ರೇಷ್ಠ ಸಂಶೋಧನೆ ಎಂದು ಬಣ್ಣಿಸಿದರು. ಇದಲ್ಲದೆ, ಒಂದು ರೀತಿಯ ಪರಮಾಣು ಇನ್ನೊಂದು ರೀತಿಯ ಪರಮಾಣುವಾಗಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯ ಸಂಶೋಧನೆಯಲ್ಲಿ ಇದೊಂದು ಮೈಲಿಗಲ್ಲು ಎಂದೂ ಪ್ರಶಂಸಿಸಿದರು. ಹೀಗಾಗಿ ನೊಬೆಲ್ ಪ್ರಶಸ್ತಿಗೆ ಮೇರಿ ಕ್ಯೂರಿ ಅರ್ಹಳು ಎಂದು ಕೊಂಡಾಡಿದರು.

೧೯೦೨ ರಲ್ಲಿ ವೈದ್ಯಕೀಯ ಬಳಕೆಗೆ ರೇಡಿಯಂ ಅನ್ನು ಉಪಯೋಗಿಸಬಹುದು ಎಂಬ ವಿಷಯ ಗೊತ್ತಾಯಿತು. ಅಂದಿನಿಂದಲೂ ಕ್ಯೂರಿ ದಂಪತಿಗಳು ಪತ್ರಕರ್ತರ ಆಕರ್ಷಣೆಗೆ ಒಳಗಾಗಿದ್ದರು. ನೊಬೆಲ್ ಪಾರಿತೋಷಕ ಬಂದ ಮೇಲೆ ಪತ್ರಕರ್ತರು ಇನ್ನೂ ಹೆಚ್ಚಾಗಿ ಈ ದಂಪತಿಗಳ ಬಗ್ಗೆ ಬರೆಯಲಾರಂಭಿಸಿದರು. ಮೇರಿ ೧೯೧೧ರಲ್ಲಿ ಫ್ರಾನ್ಸಿನ 'ಅಕಾಡೆಮಿ ಆಫ್ ಸೈನ್ಸಸ್' ನಲ್ಲಿದ್ದ  ಭೌತಶಾಸ್ತ್ರ ವಿಭಾಗದ ಏಕೈಕ ಪ್ರಾಧ್ಯಾಪಕ ಪೀಠಕ್ಕೆ ಅಭ್ಯರ್ಥಿಯಾದಳು. ಇದರಿಂದ ಪತ್ರಕರ್ತರು ಆಕೆಯನ್ನು ನೋಡುತ್ತಿದ್ದ ದೃಷ್ಟಿಕೋನವೇ ಬದಲಾಯಿತು. ಪೋಲೆಂಡಿನಿಂದ ವಲಸೆ ಬಂದವಳಾದ್ದರಿಂದ ಅಂತಹ ಪ್ರತಿಷ್ಠಿತ ಹುದ್ದೆಗೆ ಆಕೆ ಅನರ್ಹಳು ಎಂದು ಸ್ಥಳೀಯ ಪತ್ರಿಕೆಗಳು ಬಿಂಬಿಸಿದವು. ಹೀಗಾಗಿ ೧೯೧೧, ಜನವರಿ ೨೩ ರಂದು ನಡೆದ ಚುನಾವಣೆಯಲ್ಲಿ ಎರಡು ಮತಗಳ ಅಂತರದಿಂದ ಮೇರಿ ಕ್ಯೂರಿಗೆ ಸೋಲುಂಟಾಯಿತು. ಆದರೆ ಆಕೆ ಈ ಸೋಲಿನಿಂದ ವಿಚಲಿತಳಾಗಲಿಲ್ಲ. ತನ್ನ ವಿರೋಧಿಗಳ ಬಾಯಿ ಮುಚ್ಚಿಸುವಂತಹ ರೀತಿಯಲ್ಲಿ ಇನ್ನೂ ತೀವ್ರವಾಗಿ ಸಂಶೋಧನೆಯಲ್ಲಿ ತೊಡಗಿದಳು. ಆದರೆ ಈ ಸಂದರ್ಭದಲ್ಲಿ ನಡೆದ ಜನಾಂಗೀಯ ವಾದವಿವಾದಗಳು ಅವಳ ಮನಸ್ಸಿಗೆ ಬಹಳ ನೋವನ್ನು ಉಂಟುಮಾಡಿದವು.

**ಯುದ್ಧದ ಕಾರ್ಮೋಡದ ನಡುವೆ:** ೧೯೧೪, ಸೆಪ್ಟೆಂಬರ್ ೨ ರಂದು ಜರ್ಮನಿಯ ವಾಯುಸೇನೆಯು ಪ್ಯಾರಿಸ್ ನಗರದ ಮೇಲೆ ಮೂರು ಬಾಂಬುಗಳನ್ನು ಹಾಕಿತು. ಇದಾಗಿ ಒಂದು ತಿಂಗಳ ನಂತರ ಜರ್ಮನಿ ಫ್ರಾನ್ಸ್‌ನ ಮೇಲೆ ಯುದ್ಧವನ್ನು ಸಾರಿತು. ಈ ವೇಳೆಗಾಗಲೇ ಮೇರಿಯ ಕನಸಿನ ಕೂಸಾದ 'ರೇಡಿಯಂ ಸಂಸ್ಥೆ' ಯ ಕಟ್ಟಡ ಬಹುತೇಕ ಸಂಪೂರ್ಣ ಗೊಂಡಿತ್ತು. ಪ್ರಯೋಗಶಾಲೆಯನ್ನು ಅಲ್ಲಿಗೆ ಸ್ಥಳಾಂತರಿಸುವ ಕಾರ್ಯ ಮಾತ್ರ ಬಾಕಿ ಉಳಿದಿತ್ತು. ಜರ್ಮನ್ ಸೇನೆಯು ಪ್ಯಾರಿಸ್ ಕಡೆಗೆ ಮುನ್ನುಗ್ಗುತ್ತಿತ್ತು. ಕೇವಲ ಒಂದು ಗ್ರಾಮಿನಷ್ಟಿದ್ದ ಇಡೀ ಫ್ರಾನ್ಸಿನ ರೇಡಿಯಂ ದಾಸ್ತಾನು ಇದ್ದದ್ದು ಮೇರಿ ಕ್ಯೂರಿಯ ಬಳಿಯಲ್ಲಿಯೇ. ಫ್ರೆಂಚ್ ಸರ್ಕಾರ ಪ್ಯಾರಿಸ್‌ನಿಂದ ಬಾರ್ಡಕ್ಯೂ ಎಂಬ ಸ್ಥಳಕ್ಕೆ ರಾಜಧಾನಿಯನ್ನು ಸ್ಥಳಾಂತರಿಸಿತು. ಮೇರಿ ಕ್ಯೂರಿ ತನ್ನ ಬಳಿಯಲ್ಲಿದ್ದ ರೇಡಿಯಂ ಶತ್ರುಗಳ ಕೈಗೆ ಸಿಕ್ಕಬಾರದೆಂದು ತುಂಬ ಮುತುವರ್ಜಿ ವಹಿಸಿದಳು. ಭಾರವಾದ ಸತುವಿನ ಪೆಟ್ಟಿಗೆಯಲ್ಲಿ ಅದನ್ನು ಇಟ್ಟು ಸರ್ಕಾರಿ ಅಧಿಕಾರಿಗಳ ಜೊತೆಗೆ ತಾನೂ ತೆರಳಿದಳು. ಮತ್ತೆ ಅಲ್ಲಿಂದ ಸೈನಿಕರನ್ನು ಹೊತ್ತೊಯ್ಯುತ್ತಿದ್ದ ರೈಲಿನಲ್ಲಿ ಪ್ಯಾರಿಸ್‌ಗೆ ತನ್ನ ಸರಕಿನೊಡನೆ ಭದ್ರವಾಗಿ ಹಿಂತಿರುಗಿದಳು. ಇಷ್ಟು ಕಷ್ಟಪಟ್ಟರೂ, ರೇಡಿಯಂ ಅನ್ನು ಶತ್ರುಗಳಿಂದ ಕಾಪಾಡಿದ ಸಂತೃಪ್ತಿ ಅವಳದಾಗಿತ್ತು.